

# ಕಪಟ ನಾಟಕದಲ್ಲಿ ಸಂಗೀತಾ ಪಾತ್ರಧಾರಿ

ಮಳೆ ನಿಂತ ಮೇಲೂ ಮರಗಿಡ ಎಲೆಗಳೆಡೆಯಿಂದ ಹನಿಗಳು ಉದುರುತ್ತಿರುತ್ತವಲ್ಲ... ಮೀಟೂ ಪ್ರಕರಣದ ನಂತರ ಚಿತ್ರರಂಗ ಬಿಟ್ಟು ಹೋಗಿರುವ ಸಂಗೀತಾ ಭಟ್ ಅವರದೂ ಅದೇ ರೀತಿ. ಅವರು ಚಿತ್ರರಂಗ ಬಿಟ್ಟರೂ ಅವರನ್ನು ಇನ್ನೂ ಚಿತ್ರರಂಗ ಬಿಟ್ಟಿಲ್ಲ. ಬಣ್ಣದ ಸಹವಾಸವೇ ಸಾಕು ಎಂದು ಹೋದ ಮೇಲೂ ಅವರ ಸಿನಿಮಾಗಳು ತೆರೆಕಾಣುತ್ತಲೇ ಇವೆ. ಈಗ ಕ್ರಿಶ್ ನಿರ್ದೇಶನದ 'ಕಪಟನಾಟಕ ಪಾತ್ರಧಾರಿ' ಸಿನಿಮಾ ತೆರೆಗೆ ಬರುವ ಸನ್ನಾಹದಲ್ಲಿದೆ. ಈ ಚಿತ್ರದಲ್ಲಿ ಬಾಲು ನಾಗೇಂದ್ರ ಅವರ ಜೊತೆ ನಾಯಕಿಯಾಗಿ ತೆರೆ ಹಂಚಿಕೊಂಡಿರುವುದು ಸಂಗೀತಾ ಭಟ್.

ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಕಾರ್ಯಕ್ರಮದಲ್ಲಿ ಸಂಗೀತಾ ಭಟ್ ಹಾಜರಿರಲಿಲ್ಲ. ಆದರೆ ಜನರಿಗೆ ಒಂದು ವಿಡಿಯೊ ಮೂಲಕ ಅವರು ಚಿತ್ರದ ಕುರಿತು ಮಾಹಿತಿ ನೀಡಿದ್ದರು.

'ಇದು ಹಗಲು ರಾತ್ರಿ ದುಡಿದು ಕೆಲಸ ಮಾಡಿ ಪೂರ್ಣಗೊಳಿಸಿದ ಸಿನಿಮಾ. ತುಂಬ ಪ್ರೀತಿಯಿಂದ ಮುದ್ದಾಗಿ ರೂಪಿಸಿದ್ದಾರೆ ನಿರ್ದೇಶಕರು. ಈ ಚಿತ್ರದಲ್ಲಿ ನನಗೆ ಅವಕಾಶ ಸಿಕ್ಕಿದ್ದಕ್ಕೆ ಸಾಕಷ್ಟು ಖುಷಿಯಿದೆ. ಛಾಯಾಗ್ರಹಣ, ಸಂಗೀತ, ನಟನೆ ಎಲ್ಲವೂ ತುಂಬ ಚೆನ್ನಾಗಿದೆ' ಎಂದು ಹೇಳಿದ್ದಾರೆ. ಡಿಫರೆಂಟ್ ಆಗಿರುವ, ಪ್ರಯೋಗಾತ್ಮಕ ಪಾತ್ರ ಮಾಡಬೇಕು ಎಂಬ ನನ್ನ ಅಭಿಲಾಷೆ ಈ ಚಿತ್ರದ ಪಾತ್ರದ ಮೂಲಕ ಈಡೇರಿದೆ ಎಂದೂ ಹೇಳಿರುವ ಸಂಗೀತಾ, 'ಈ ಸಿನಿಮಾ ತೆರೆಕಾಣುವ ಸಂದರ್ಭದಲ್ಲಿ ಅಲ್ಲಿ ಇರಬೇಕು ಎಂದುಕೊಂಡಿದ್ದೇನೆ' ಎಂದೂ ಹೇಳಿದ್ದಾರೆ.

ಚಿತ್ರ: ಅಭಿಷೇಕ್ ಎಸ್.ಎನ್.



# 'ಭಿನ್ನ' ಬಗೆಯಲ್ಲಿ ಬಿಡುಗಡೆ

'ಶುದ್ಧಿ' ಸಿನಿಮಾದಲ್ಲಿಯೇ ತಾವೊಬ್ಬ ಭಿನ್ನ ನಿರ್ದೇಶಕ ಎನ್ನುವುದನ್ನು ಸಾಬೀತುಮಾಡಿದ್ದ ಆದರ್ಶ್ ಈಶ್ವರಪ್ಪ, ಎರಡನೇ ಸಿನಿಮಾದ ಶೀರ್ಷಿಕೆಯಲ್ಲಿಯೇ 'ಭಿನ್ನ'ವಾಗಿದ್ದು ಹಳೇ ವಿಷಯ. ಇದೀಗ 'ಭಿನ್ನ' ಸಿನಿಮಾ ಬಿಡುಗಡೆಯಾಗಿದೆ. ಹಾಗಂತ ಗಾಂಧಿನಗರದ ಮುಖ್ಯ ಚಿತ್ರಮಂದಿರದಲ್ಲಿ, ಕಟೌಟ್‌ಗಳು, ಹಾರ ತುರಾಯಿಗಳು, ಗಡಚಿಕ್ಕುವ ಪಟಾಕಿ ಸದ್ದು ಏನೂ ಇಲ್ಲ. ಅವೆಲ್ಲ ಇಲ್ಲದೆ ಸಿನಿಮಾ ಬಿಡುಗಡೆ ಸಾಧ್ಯವೇ ಎಂದು ಹುಬ್ಬೇರಿಸಬೇಡಿ. ಈ ಚಿತ್ರ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದ್ದಲ್ಲ, ಬದಲಿಗೆ 'ಜಿ 5', ಆನ್ಲೈನ್ ವೇದಿಕೆಯಲ್ಲಿ ಬಿಡುಗಡೆಯಾಗಿದೆ.



ಅಕ್ಟೋಬರ್ 8ರಿಂದ 'ಭಿನ್ನ' ಜಿ 5ನಲ್ಲಿ ವೀಕ್ಷಣೆಗೆ ಲಭ್ಯವಿದೆ. ಇದುವರೆಗೆ ಕೆಲವು ಹಿಂದಿ ಸಿನಿಮಾಗಳನ್ನು ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವುದಕ್ಕೂ ಮುನ್ನವೇ ಕೊಂಡು ಆನ್ಲೈನ್‌ನಲ್ಲಿ ಬಿಡುಗಡೆ ಮಾಡಿದ ಉದಾಹರಣೆಗಳಿವೆ. ಆದರೆ ಕನ್ನಡದ ಮಟ್ಟಿಗೆ ಇದೇ ಮೊದಲ ಪ್ರಯತ್ನ.

'ನನ್ನ ಮೊದಲ ಚಿತ್ರ 'ಶುದ್ಧಿ', ಚಿತ್ರಮಂದಿರಗಳಲ್ಲಿಯೂ ಬಿಡುಗಡೆಯಾಗಿತ್ತು. ಆದರೆ ನೆಟ್‌ಫ್ಲಿಕ್ಸ್‌ಗೆ ಬಂದ ಮೇಲೆಯೇ ಆ ಸಿನಿಮಾವನ್ನು ಹೆಚ್ಚು ಜನ ನೋಡಿದ್ದು. ಚರ್ಚೆಯಾಗಿದ್ದು. 'ಭಿನ್ನ' ಸಿನಿಮಾ ಕೂಡ ಇಂದಿನ ಆನ್ಲೈನ್ ಪ್ರೇಕ್ಷಕರಿಗೆ ಇಷ್ಟವಾಗುವ ರೀತಿಯಲ್ಲಿಯೇ ಇದೆ. ಆದರೆ ಇಂಥದ್ದೊಂದು ಸಿನಿಮಾ ಆನ್ಲೈನ್‌ನಲ್ಲಿ ನೋಡಬಹುದು ಎಂಬ ವಿಷಯವನ್ನು ಜನರಿಗೆ ತಲುಪಿಸುವ ಸವಾಲು ನಮ್ಮೆದುರು ಇದೆ' ಎನ್ನುತ್ತಾರೆ ಆದರ್ಶ್.

'ನಮ್ಮ ನಿರ್ಮಾಪಕರು ಹಾಕಿರುವ ಬಂಡವಾಳಕ್ಕಿಂತ ಸಾಕಷ್ಟು ಹೆಚ್ಚು ಹಣ ಕೊಟ್ಟೇ ಕೊಂಡುಕೊಂಡಿದ್ದಾರೆ. 195 ದೇಶಗಳಲ್ಲಿ ಜಿ 5 ಲಭ್ಯವಿದೆ. ಮುಂದೆ ಹಿಂದಿ, ತಮಿಳು, ತೆಲುಗು ಭಾಷೆಗಳಲ್ಲಿ ಅವರೇ ಡಬ್ ಮಾಡಿ ಬಿಡುಗಡೆ ಮಾಡುತ್ತಾರೆ. ಹೀಗಾಗಿ ಹಲವು ಬಗೆಯ ಪ್ರೇಕ್ಷಕರಿಗೆ ತಲುಪುವ ನಿರೀಕ್ಷೆ ಇದೆ' ಎನ್ನುವ ಆದರ್ಶ್, 'ಈ ಚಿತ್ರ ಪುಟ್ಟಣ್ಣ ಕಣಗಾಲ್ ಅವರಿಗೆ ಒಂದು ಒಳ್ಳೆಯ ಟ್ರಿಬ್ಯೂಟ್ ಆಗುತ್ತದೆ' ಎಂದು ಸಿನಿಮಾ ಬಗ್ಗೆ ನಿರೀಕ್ಷೆ ಹುಟ್ಟಿಸುತ್ತಾರೆ.